ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 18-01-1976.

# *ಸ್ಮೃತಿದಿವಸವನ್ನು ಸಮರ್ಥತೆಯ ದಿವಸದ ರೂಪದಲ್ಲಿ ಆಚರಿಸಿರಿ*

(समर्थी दिवस के रूप में स्मृति-दिवस )

**ಸರ್ವಾತ್ಮರ ಪರಮ ಸ್ನೇಹಿ ಶಿವಪರಮಾತ್ಮ ಹೇಳಿದರು.**

ಇಂದು ಬಾಪ್‌ದಾದಾರವರು ತನ್ನ ಸರ್ವ ಲವಲೀನ ಮಕ್ಕಳನ್ನು ನೋಡಿ ಮಕ್ಕಳ ಸ್ನೇಹದ ಪ್ರತ್ಯುತ್ತರವನ್ನು ಕೊಡುತ್ತಿದ್ದಾರೆ. ಸದಾ ತಂದೆಯ ಸಮಾನ ವಿದಾತ ಮತ್ತು ವರದಾತ ಭವ! ಸದಾ ವಿಶ್ವಕಲ್ಯಾಣಕಾರಿ, ವಿಶ್ವದ ರಾಜ್ಯಾಧಿಕಾರಿ ಭವ! ಸದಾ ಮಾಯೆ, ಪ್ರಕೃತಿ ಮತ್ತು ಸರ್ವ ಪರಿಸ್ಥಿತಿಗಳ ವಿಜಯಿ ಭವ! ಇಂದು ಬಾಪ್‌ದಾದಾರವರು ಸರ್ವ ವಿಜಯೀ ಮಕ್ಕಳ ಮಸ್ತಕದ ಮಧ್ಯೆ ವಿಜಯದ ತಿಲಕವು ಹೊಳೆಯುತ್ತಿರುವುದನ್ನು ನೋಡುತ್ತಿದ್ದಾರೆ. ಸರ್ವಮಕ್ಕಳ ಹಸ್ತಗಳಲ್ಲಿ ಇದೇ ವಿಜಯದ ಬಾವುಟವನ್ನು ನೋಡುತ್ತಿದ್ದಾರೆ. ಪ್ರತಿಯೊಬ್ಬರ ಹೃದಯದ ಶಬ್ದವಿದೆ- “ವಿಜಯವು ನಮ್ಮ ಜನ್ಮಸಿದ್ಧ ಅಧಿಕಾರವಾಗಿದೆ” ಎನ್ನುವ ಧ್ವನಿಯು ಮೊಳುಗುತ್ತಿರುವುದನ್ನು ಕೇಳಿಸಿಕೊಳ್ಳುತ್ತಿದ್ದಾರೆ. ಇಂದು ಅಮೃತವೇಳೆಯಲ್ಲಿ ಸರ್ವಮಕ್ಕಳ ಸ್ನೇಹ ಮತ್ತು ಆಹ್ವಾನ ಮಾಡುತ್ತಿರುವ ಮಧುರಾತಿ ಮಧುರವಾದ ಆಲಾಪವನ್ನು ಕೇಳಿಸಿಕೊಳ್ಳುತ್ತಿದ್ದರು. ದೂರ-ದೂರದಲ್ಲಿರುವ ಅಗಲಿರುವಂತಹ, ಚಡಪಡಿ ಸುತ್ತಿರುವಂತಹ ಗೋಪಿಕೆಯರು ನದಿಯ ಸಮಾನ ಸಾಗರದಲ್ಲಿ ಸಮಾವೇಶ ವಾಗುತ್ತಿದ್ದರು. ಬಾಪ್‌ದಾದಾರವರೂ ಸಹ ಮಕ್ಕಳ ಸ್ನೇಹದ ಸ್ವರೂಪದಲ್ಲಿ ಸಮಾವೇಶವಾಗಿಬಿಟ್ಟರು. ಪ್ರತಿಯೊಬ್ಬರ ಮಧುರಾತಿ ಮಧುರ ರತ್ನಗಳು ಹೃದಯದ ಹಾರವಾಗಿ ಬಾಪ್‌ದಾದಾರವರ ಕೊರಳಿನಲ್ಲಿ ಸಮಾವೇಶ ವಾದರು. ಪ್ರತಿಯೊಬ್ಬರ ಭಿನ್ನ ಭಿನ್ನವಾದ ಸಂಕಲ್ಪ, ವಿವಿಧ, ಮಧುರವಾದ ಶೃಂಗಾರದ ರೂಪದಲ್ಲಿ ಕೇಳಿಸುತ್ತಿತ್ತು. ಈಗೀಗ ನಾಲ್ಕೂ ಕಡೆಯಿಂದ ಅನೇಕ ಮಕ್ಕಳು ಬಾಪ್‌ದಾದಾರವರಿಗೆ ನೆನಪಿನ ಮಾಲೆಗಳನ್ನು ಹಾಕುತ್ತಿದ್ದರು. ಇಂದಿನ ದಿನ ಸ್ಮೃತಿದಿವಸದ ಜೊತೆಜೊತೆಗೆ ಸಮರ್ಥ ದಿವಸ ಎಂದೂ ಹೇಳಲಾಗುತ್ತದೆ. ಇಂದಿನ ಈ ನೆನಪಾರ್ಥ ದಿವಸದಲ್ಲಿ ಬಾಪ್‌ದಾದಾರವರು ಆದಿಯಲ್ಲಿ ಹೇಗೆ ಮಕ್ಕಳ ತಲೆಯಮೇಲೆ ಜ್ಞಾನಕಳಸವನ್ನಿಟ್ಟರು, ಸಾಕಾರನ ಮೂಲಕ ಶಕ್ತಿಯರಿಗೆ ತನು-ಮನ-ಧನದ ಅರ್ಪಣೆ ಮಾಡಿದರು. ಅದೇರೀತಿ ಸಾಕಾರ ತನುವಿನ ಮೂಲಕ ಸಾಕಾರದ ಪಾತ್ರದ ಅಂತಿಮ ಸಮಯದಲ್ಲಿ ಶಕ್ತಿಸೇನೆಗೆ ವಿಶ್ವಕಲ್ಯಾಣದ ಆತ್ಮಿಕ ಶಕ್ತಿಯ ಅರ್ಪಣೆ ಮಾಡಿದರು. ಸ್ವಯಂ ಸೂಕ್ಷ್ಮ ವತನವಾಸಿಯಾಗಿ ಸಾಕಾರದಲ್ಲಿ ಮಕ್ಕಳನ್ನು ನಿಮಿತ್ತ ಮಾಡಿದರು ಆದ್ದರಿಂದ ಇದು ಸಮರ್ಥ-ದಿವಸವಾಗಿದೆ.

ಇಂದು ತಂದೆಯು ಸರ್ವಮಕ್ಕಳಿಗೆ ಸ್ನೇಹದಲ್ಲಿ, ಶಬ್ದದಿಂದ ದೂರಮಾಡಿ ಸ್ವಯಂನಲ್ಲಿ ಸಮಾವೇಶ ಮಾಡಿಕೊಳ್ಳಲು ಹೋಗುತ್ತಿದ್ದಾರೆ. ಈ ಸಮಯದಲ್ಲಿ ನಾಲ್ಕೂಕಡೆಯಿಂದ ಪೂರ್ಣಶಕ್ತಿಯಿಂದ ಎಲ್ಲರ ದೂರುಗಳು ಮತ್ತು ಆಹ್ವಾನದ ಮನಸ್ಸಿನ ಧ್ವನಿಯು ಬರುತ್ತಿದೆ. ತಮ್ಮೆಲ್ಲರಿಗೂ ಕೇಳಿಸುತ್ತಿದೆಯೇ? ಹೊಸ-ಹೊಸ ಮಕ್ಕಳಿಗೆ ಬಾಪ್‌ದಾದಾರವರು ವಿಶೇಷವಾಗಿ ನೆನಪಿನ ಪ್ರತ್ಯುತ್ತರವನ್ನು ಕೊಡುತ್ತಿದ್ದಾರೆ. ಹೇಗೆ ಹಳೆಯ ಮಕ್ಕಳಿಗೆ ಡಬಲ್ ಇಂಜಿನ್‌ನ ಲಿಫ್ಟ್ ಸಿಕ್ಕಿದೆ ಹಾಗೆಯೇ ಹೊಸ ಮಕ್ಕಳಿಗೆ ಬಾಪ್‌ದಾದಾರವರು, ಗುಪ್ತವಾದ ಸಹಯೋಗದ ಪ್ರಾಪ್ತಿಯ ಅನುಭವದ ಖುಷಿಯ ಖಜಾನೆಯ ವಿಶೇಷ ಲಿಫ್ಟನ್ನು ಕೊಡುತ್ತಿದಾರೆ. ಅವರ ಅನೇಕ ದೂರುಗಳನ್ನು ಸೇವೆ ಮತ್ತು ಸದಾ ಜೊತೆಯ ಅನುಭವದ ಮೂಲಕ ಉಮ್ಮಂಗ, ಉತ್ಸಾಹದದ ರೂಪದಲ್ಲಿ ಪರಿವರ್ತನೆ ಮಾಡುತ್ತಿದ್ದಾರೆ. ಹೇಗೆ ಹೊಸಮಕ್ಕಳ ವಿಶೇಷ ಸೆಳೆತವು ತಂದೆ ಮತ್ತು ಸೇವೆಯೊಂದಿಗಿದೆಯೋ ಹಾಗೆಯೇ ಬಾಪ್‌ದಾದಾರವರ ವಿಶೇಷವಾದ ಸಹಯೋಗದ ದೃಷ್ಟಿಯೂ ಸಹ ಹೊಸ ಮಕ್ಕಳ ಮೇಲಿದೆ. ತಂದೆಯೂ ಸಹ ಇಂತಹ ಮಕ್ಕಳ ಚಮತ್ಕಾದರ ಗುಣಗಾಯನ ಮಾಡುತ್ತಿದ್ದಾರೆ. ಒಳ್ಳೆಯದು.

**ಸರ್ವಸ್ನೇಹಿ, ಸದಾ ಒಬ್ಬ ತಂದೆಯ ಪ್ರೀತಿಯಲ್ಲಿ ಮಗ್ನರಾಗಿರುವಂತಹ, ಬಾಪ್‌ದಾದಾರವರವನ್ನು ಪ್ರಖ್ಯಾತ ಮಾಡುವಂತಹ, ಸರ್ವ ಆತ್ಮರ ಮೂಲಕ ಜಯಜಯಕಾರದ ವಿಜಯಮಾಲೆಯನ್ನು ಧಾರಣೆ ಮಾಡಲು ನಿಮಿತ್ತರಾಗಿರುವಂತಹ ವಿಜಯೀ, ತಂದೆಯ ಸಮಾನ ಸರ್ವಗುಣಗಳನ್ನು ಸಾಕಾರ ರೂಪದಲ್ಲಿ ಪ್ರತ್ಯಕ್ಷ ಮಾಡುವಂತಹ, ಸರ್ವಸಿದ್ಧಿಗಳನ್ನು ಸೇವೆಯಪ್ರತಿ ತೊಡಗಿಸುವಂತಹ ವಿಶ್ವಕಲ್ಯಾಣಕಾರಿ ಬಾಪ್‌ದಾದಾರವರ ಹೃದಯ ಸಿಂಹಾಸನ ಅಧಿಕಾರಿ ಮಕ್ಕಳಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ದೀದಿಯವರ ಹಾಗೂ ಅನ್ಯಮಕ್ಕಳನ್ನು ಮುಂದೆ ನೊಡುತ್ತಾ ಬಾಪ್ ದಾದಾರವರು ಹೇಳಿದರು:-**

ಇಂದು ಮಕ್ಕಳ ಸ್ವರೂಪವು ವಿಶೇಷವಾಗಿ ಯಾವುದಿತ್ತು? ಸ್ನೇಹದ ಸ್ವರೂಪದ ಜೊತೆಜೊತೆಗೆ ದೂರುಗಳನ್ನೂ ಕೊಟ್ಟರು. ಹೇಗೆ ತಂದೆಯು ಜ್ಞಾನಸಾಗರನಾಗಿದ್ದಾರೆ ಅಂದಮೇಲೆ ಸಾಗರದ ವಿಶೇಷತೆ ಏನಾಗಿರುತ್ತದೆ? ಎಷ್ಟು ಅಲೆಗಳಿರುತ್ತದೆ, ಅಷ್ಟೇ ಶಾಂತವಾಗಿಯೂ ಇರುತ್ತದೆ. ಆದರೆ ಒಂದೇ ಸಮಯದಲ್ಲಿ ಎರಡೂ ವಿಶೇಷತೆಗಳಿರುತ್ತದೆ. ಹಾಗೆಯೇ ತಂದೆಯ ಸಮಾನರಾಗುವವರ ವಿಶೇಷತೆಯೂ ಇದೇ ಆಗಿದೆ- ಹೊರಗಿನಿಂದ ಸ್ಮೃತಿಸ್ವರೂಪ ಮತ್ತು ಒಳಗಿನಿಂದ ಸಮರ್ಥಸ್ವರೂಪ- ಸಾಕಾರ ಸ್ವರೂಪದಲ್ಲಿ ಸ್ಮೃತಿ ಸ್ವರೂಪ ಎಷ್ಟಿರುತ್ತದೆ, ಆಂತರ್ಯದಿಂದ ಅಷ್ಟೇ ಸಮರ್ಥ ಸ್ವರೂಪರಾಗಿರಬೇಕು. ಎರಡೂ ಜೊತೆಜೊತೆಗೆ ಬ್ಯಾಲೆನ್ಸ್ ಇರಬೇಕು- ಈ ರೀತಿಯಿದೆಯೇ? ಎಂತಹ ಸಮಯ ಹಾಗೂ ಎಂತಹ ದಿನವೋ ಅಂತಹ ಸ್ವರೂಪವಂತು ಇದ್ದೇ ಇರುತ್ತದೆ. ಆದರೆ ಅಲೌಕಿಕತೆ ಇದಾಗಿದೆ ಎರಡರ ಬ್ಯಾಲೆನ್ಸ್‌ನ ಸ್ವರೂಪವು ಸ್ಪಷ್ಟವಾಗಿ ಕಾಣಿಸಲಿ. ಪಾತ್ರವನ್ನೂ ಅಭಿನಯಿಸುತ್ತಿದ್ದೀರಿ ಆದರೆ ಜೊತೆಜೊತೆಗೆ ಸಾಕ್ಷಿಯಾಗಿರುವ ಸ್ಥಿತಿಯೂ ಇರಬೇಕು. ಸಾಕ್ಷಿ ಸ್ಥಿತಿಯಾಗುವುದರಿಂದ ಪಾತ್ರವನ್ನೂ ಆಕ್ಯುರೇಟ್ ಆಗಿ ಅಭಿನಯಿಸುತ್ತೀರಿ. ಆದರೆ ಪಾತ್ರದ ಸ್ವರೂಪರಾಗಬಾರದು, ಅರ್ಥಾತ್ ಪಾತ್ರಕ್ಕೆ ವಶರಾಗುವುದಿಲ್ಲ. ವಿಲ್-ಪವರ್ ಇರುತ್ತದೆ. ಏನನ್ನು ಬಯಸುತ್ತೀರಿ, ಯಾವ ಗಳಿಗೆಯಲ್ಲಿ ಬಯಸುತ್ತೀರಿ ಆಗ ತಮ್ಮ ಸ್ವರೂಪವನ್ನು ಧಾರಣೆ ಮಾಡಲು ಸಾಧ್ಯವಾಗುತ್ತದೆಯೆಂದರೆ ಹೇಳಲಾಗುತ್ತದೆ - ವಿಲ್ ಪವರ್, ಪ್ರೇಮಸ್ವರೂಪದಲ್ಲಿ ಶಕ್ತಿ ಸ್ವರೂಪವೂ ಜೊತೆಜೊತೆಯಲ್ಲಿ ಸಮಾವೇಶವಾಗಿರಬೇಕು. ಕೇವಲ ಪ್ರೇಮ ಸ್ವರೂಪರಾಗುವುದು ಲೌಕಿಕತೆಯಾಯಿತು. ಎಲ್ಲಿ ಪ್ರೇಮ ಸ್ವರೂಪದ ಜೊತೆಜೊತೆಗೆ ಶಕ್ತಿಶಾಲಿ ಸ್ವರೂಪವೂ ಇರುತ್ತದೆಯೋ ಅದು ಅಲೌಕಿಕತೆಯಾಗಿದೆ ಆದ್ದರಿಂದ ಶಕ್ತಿಶಾಲಿ ಸ್ವರೂಪದ ಅಂತಿಮ ದೃಶ್ಯದಲ್ಲಿ ನಷ್ಟಮೋಹ ಸ್ಮೃತಿ ಸ್ವರೂಪವಾಗಿ ತೋರಿಸಲಾಗಿದೆ. ಎಷ್ಟು ಅತೀಸ್ನೇಹ, ಅಷ್ಟೇ ಅತೀ ನಷ್ಟಮೋಹ ಆಗಿರಬೇಕು. ಅಂದಮೇಲೆ ಅಂತಿಮ ಪರೀಕ್ಷೆಯಾಗಿ ಏನನ್ನು ನೋಡಿದಿರಿ? ಸ್ನೇಹವಿದ್ದರೂ ನಷ್ಟಮೋಹ ಸ್ಮೃತಿಸ್ವರೂಪ. ಇದೇ ಅಂತಿಮ ಪೇಪರ್ (ಪರೀಕ್ಷೆ)ನ್ನು ನೆನಪಾರ್ಥದಲ್ಲಿಯೂ ಗಾಯನ ರೂಪದಲ್ಲಿದೆ. ಇದೇ ಪ್ರಾಕ್ಟಿಕಲ್ ಕರ್ಮವನ್ನು ಮಾಡಿ ತೋರಿಸಿದರು. ಸಾಕಾರ ಸಂಬಂಧವು ಸನ್ಮುಖದಲ್ಲಿದ್ದರೂ ಸಮಾವೇಶ ಮಾಡಿಕೊಳ್ಳುವ ಶಕ್ತಿಯೂ ಇತ್ತು ಮತ್ತು ಸಹನೆ ಮಾಡುವ ಶಕ್ತಿಯೂ ಇತ್ತು. ಇವೆರಡೂ ಶಕ್ತಿಗಳ ಸ್ವರೂಪವನ್ನು ನೋಡಿದಿರಿ. ಒಂದುಕಡೆ ಸ್ನೇಹವನ್ನು ಸಮಾವೇಶ ಮಾಡಿಕೊಳ್ಳುವುದು, ಇನ್ನೊಂದುಕಡೆ ಉಳಿದುಕೊಂಡಿರುವ ಅಂತಿಮ ಲೆಕ್ಕಾಚಾರವನ್ನು ಸಹನಶಕ್ತಿಯಿಂದ ಸಮಾಪ್ತಿ ಮಾಡುವುದು. ಸಮಾವೇಶವನ್ನೂ ಮಾಡಿಕೊಳ್ಳಬೇಕು ಮತ್ತು ಸಹನೆಯನ್ನೂ ಮಾಡಬೇಕು. ಇವರೆಡೂ ಸ್ವರೂಪವನ್ನು ಕರ್ಮದಲ್ಲಿ ನೋಡಿದಿರಿ. ತಂದೆಗೆ ಮಕ್ಕಳಪ್ರತಿ ಸ್ನೇಹವಿರಲಿಲ್ಲವೇ? ಸ್ನೇಹದ ಸಾಗರವಾಗಿದ್ದರೂ ಶಾಂತವಾಗಿದ್ದರು. ತನ್ನ ಶರೀರದಿಂದಲೂ ಉಪರಾಂ ಆಗಿದ್ದರು- ಇದೇ ಅಂತಿಮ ಸ್ಥಿತಿಯಾಗಿದೆ. ಇದನ್ನು ಪ್ರ್ಯಾಕ್ಟಿಕಲ್‌ನಲ್ಲಿ ಕರ್ಮಮಾಡಿ ತೋರಿಸಿದರು. ಇದೇ (ರಾತ್ರಿಯ) ಸಮಯವಾಗಿತ್ತಲ್ಲವೆ. ಅಂತಿಮ ಪೇಪರ್‌ನಲ್ಲಿ ಫಸ್ಟ್‌ನಂಬರಿನಲ್ಲಿ ಪ್ರ್ಯಾಕ್ಟಿಕಲ್‌ನಲ್ಲಿ ಮಾಡಿದರು. ಸ್ವರೂಪದಲ್ಲಿ ತರುವುದು ಸಹಜವಾಗುತ್ತದೆ ಆದರೆ ಸಮಾವೇಶ

ಮಾಡಿಕೊಳ್ಳುವುದರಲ್ಲಿ ವಿಲ್‌ಪವ ಇರಬೇಕಾಗಿದೆ. ಪೂರ್ಣ ಪಾತ್ರದಲ್ಲಿ ಸಮಾವೇಶ ಮಾಡಿಕೊಳ್ಳುವುದನ್ನು ನೋಡಿದಿರಿ. ಕರ್ಮಭೋಗವನ್ನೂ ಸಮಾವೇಶ ಮಾಡಿಕೊಂಡರು ಮತ್ತು ಸ್ನೇಹವನ್ನೂ ಸಮಾವೇಶ ಮಾಡಿಕೊಂಡರು. ಇದೇ ವಿಲ್‌ಪವರ್ ಆಗಿದೆ. ಇದೇ ವಿಲ್‌ಪವರನ್ನು ಅಂತ್ಯದಲ್ಲಿ ಮಕ್ಕಳಿಗೆ ವಿಲ್ ಮಾಡಿದರು. ಒಳ್ಳೆಯದು.

ಅವ್ಯಕ್ತ ಮುರಳಿ 18-01-1976.

***ಸ್ಮೃತಿ ದಿವಸವನ್ನು ಸಮರ್ಥತೆಯ ದಿವಸದ ರೂಪದಲ್ಲಿ ಆಚರಿಸಿರಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯ ಲವಲೀನ ಮಗುವಾಗಿದ್ದೇನೆ.

2. ನಾನು ವಿಧಾತ, ವರದಾತ, ವಿಶ್ವಕಲ್ಯಾಣಕಾರಿ, ವಿಶ್ವರಾಜ್ಯಾಧಿಕಾರಿ, ಸದಾ ಮಾಯೆ ಮತ್ತು ಪ್ರಕೃತಿಯ ಸರ್ವ ಪರಿಸ್ಥಿತಿಗಳಲ್ಲಿ ವಿಜಯೀ ಸ್ವರೂಪ.

3. ನಾನು ನನ್ನ ಮಸ್ತಕದಲ್ಲಿ ಸದಾ ವಿಜಯದ ತಿಲಕ ಹೊಳೆಯುತ್ತಿರುವ ವಿಜಯೀ ಸ್ವರೂಪ, ಸಫಲತೆ ನನ್ನ ಜನ್ಮ ಸಿದ್ಧ ಅಧಿಕಾರ.

4. ನಾನು ಬಾಪ್‌ದಾದಾರವರ ಸಮಾನವಾಗಿ ಎಲ್ಲರ ಶಿರಸ್ಸಿನ ಮೇಲೆ ಜ್ಞಾನ ಕಳಸವನ್ನು ಇಟ್ಟು, ತನು, ಮನ, ಧನವನ್ನು ಮತ್ತು ಶಕ್ತಿಸೇನೆಗೆ ವಿಶ್ವಕಲ್ಯಾಣಕ್ಕಾಗಿ ಆತ್ಮಿಕ ಶಕ್ತಿಯನ್ನು ಅರ್ಪಣೆ ಮಾಡಿದ್ದೇನೆ.

5. ನಾನು ಗುಪ್ತವಾದ ಸಹಯೋಗ ಪ್ರಾಪ್ತಿಯ ಅನುಭವದ ಲಿಫ್ಟ್ ಮತ್ತು ಖುಷಿಯ ಖಜಾನೆಯ ವಿಶೇಷ ಗಿಫ್ಟನ್ನು ತಂದೆಯಿಂದ ಪಡೆದಿದ್ದೇನೆ.